**ದಿನಾಂಕ: 29.04.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಲಾಯಿತು.**

**ಪಾಟೀ ಸವಾಲು: 1 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಬಿ ಆರ್ ಪಿ ಅವರಿಂದ:**

1. ವಾದಿ ಯಾವ ಕಾರಣಕ್ಕೆ ಕೇಸ ಮಾಡಿರುತ್ತಾಳೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಸಾಕ್ಷಿ ನುಡಿಯಲು ನನ್ನನ್ನು ವಾದಿಯೇ ಕರೆದುಕೊಂಡು ಬಂದಿದ್ದಳು. ವಾದಿ ಯಾವುದರ ಸಲುವಾಗಿ ಕೇಸ ಮಾಡಿರುತ್ತಾಳೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ವಾದಿ ಹೇಳಿದ್ದಕ್ಕೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿ.

**ಪಾಟೀ ಸವಾಲು: 2 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎಮ್ ಬಿ ಕೆ ಅವರಿಂದ:**

2. ಈ ಕೇಸ ಯಾರು ಯಾವುದರ ಸಲುವಾಗಿ ಏಕೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಹಿರೇನಂದಿಹಾಳ್ ಗ್ರಾಮದವಳು. ಈ ಹಿಂದೆ ಪಾರವ್ವ ಮತ್ತು ಪಾರವ್ವನ ಮಗ ಸಾಕ್ಷಿ ಪ್ರಮಾಣ ಪತ್ರ ಹೇಳಿ ಬರೆಸಿದ್ದರು ಎಂದರೆ ಗೊತ್ತಿಲ್ಲ. ಸಾಕ್ಷಿ ನುಡಿಯಲು ಪಾರವ್ವ ಮತ್ತು ಪಾರವ್ವನ ಮಗ ನನನ್ನು ಸಾಕ್ಷಿಯನ್ನು ನುಡಿಯಲು ಕರೆಸಿದ್ದರು ಎಂದರೆ ಗೊತ್ತಿಲ್ಲ. ಸಾಕ್ಷಿಯನ್ನು ನುಡಿಯಲು ನನಗೆ ಯಾರಾದರು ಬೆದರಿಕೆಯನ್ನು ಹಾಕಿದ್ದರು ಎಂದರೆ ಇಲ್ಲ.

**( ಈ ಹಂತದಲ್ಲಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ವಾದಿ ಪರ ವಕೀಲರು 2 ನೇ ಕಲಾಪದಲ್ಲಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು, ಮನವಿಯನ್ನು ಪರಿಗಣಿಸಿ ಅನುಮತಿ ನೀಡಲಾಯಿತು)**

**ದಿನಾಂಕ:** 29.04.2026 **ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಮ್ ಎಮ್ ಎಮ್ ವಕೀಲರಿಂದ ಃ**

3. ನಾನು ನಿಮ್ಮ ವಕೀಲರ ಕಛೇರಿಗೆ ಬಂದಿದ್ದೆ ಎಂದರೆ ಸರಿ. ಆ ರೀತಿ ಬಂದಾಗ ಪಾರವ್ವ ಮತ್ತು ಆಕೆಯ ಅಕ್ಕನ ವಿಚಾರ ಮಾತನಾಡಿ ಪುನಹ ಬರುತ್ತೇನೆಂದು ಹೇಳಿದ್ದೆ ಎಂದರೆ ನೆನಪಿಲ್ಲ. ಆ ನಂತರ ಪುನಹ ಎರಡು ಸಾರಿ ವಕೀಲರ ಕಛೇರಿಗೆ ಬಂದಿದ್ದೆ ಎಂದರೆ ಸರಿ. ಆ ಸಮಯದಲ್ಲಿ ನಾನು ಹೇಳಿದ ಮಾಹಿತಿಯಂತೆ ಸಾಕ್ಷಿ ಪ್ರಮಾಣ ಪತ್ರವನ್ನು ತಯಾರಿಸಿ ನ್ಯಾಯಾಲಯಕ್ಕೆ ಕೊಟ್ಟಿತ್ತು ಎಂದರೆ ಸರಿ. ಸದರಿ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿ ನಾನು ಪುನಹ ಊರಿಗೆ ಹೋಗಿದ್ದೆ ಎಂದರೆ ಸರಿ.

4. ನನ್ನ ಗಂಡನ ಹೆಸರು ಕರಿಯಪ್ಪ. ಕರಿಯಪ್ಪನ ತಂದೆಯ ಹೆಸರು ದ್ಯಾಮಣ್ಣ, ಸದರಿ ದ್ಯಾಮಣ್ಣ ನನ್ನ ಮಾವ ಎಂದರೆ ಸರಿ. ನನ್ನ ಅತ್ತೆಯ ಹೆಸರು ಭೀಮವ್ವ. ಸದರಿ ನನ್ನ ಅತ್ತೆ ಮಾವರಿಗೆ ಹನುಮಪ್ಪ, ಕರಿಯಪ್ಪ, ಹನುಮವ್ವ, ಪ್ರಾಸಾ 3 ಶ್ರಾವಂತವ್ವ , 2 ನೇ ಪ್ರತಿವಾದಿ ಯಲ್ಲವ್ವ ಮತ್ತು ಗೌರವ್ವ ಎಂಬ ಮಕ್ಕಳು ಎಂದರೆ ಸರಿ. ನಾನು ಮತ್ತು ಪ್ರಾಸಾ 3 ಹಿರೇನಂದಿಹಾಳ ಗ್ರಾಮದಲ್ಲಿ ಅಕ್ಕ ಪಕ್ಕ ಮನೆಯಲ್ಲಿ ವಾಸವಿದ್ದೆವು ಎಂದರೆ ಸರಿ. ಯಲ್ಲವ್ವ ನನ್ನು ನನ್ನ ಅಣ್ಣನ ಮಗ ಗೋವಿಂದಗೌಡನಿಗೆ ಮದುವೆಯನ್ನು ಮಾಡಿಕೊಟ್ಟಿತ್ತುಎಂದರೆ ಸರಿ. ನನ್ನ ತಂದೆ ತಾಯಿಗೆ ಮೂರು ಜನ ಗಂಡು ಮಕ್ಕಳು, ಅವರ ಹೆಸರು ಹೊನ್ನನಗೌಡ, ದ್ಯಾಮನಗೌಡ ಮತ್ತು ಗೋವಿಂದಗೌಡ. ಸದರಿ ಯಲ್ಲವ್ವನನ್ನು ಗೋವಿಂದಗೌಡನಿಗೆ ಕೊಟ್ಟಿದ್ದು ಪಾರವ್ವ ಮತ್ತು ಹೊನ್ನವ್ವ ಇಬ್ಬರು ಹೆಣ್ಣುಮಕ್ಕಳು ಮಾತ್ರ ಎಂದರೆ ಸರಿ. ಹೊನ್ನವ್ವ ದೊಡ್ಡವಳು, ಪಾರವ್ವ ಚಿಕ್ಕವಳು. ಯಲ್ಲವ್ವನ ಗಂಡ ಗೋವಿಂದಪ್ಪ ಹೊನ್ನವ್ವ ಮತ್ತು ಪಾರ್ವತಿ ಚಿಕ್ಕವರಿದ್ದಾಗ ತೀರಿಕೊಂಡಿರುತ್ತಾನೆ ಎಂದರೆ ಸರಿ. ಆ ಕಾರಣದಿಂದ ಯಲ್ಲವ್ವ, ಹೊನ್ನವ್ವ ಮತ್ತು ಪಾರ್ವತೆವ್ವಳ್ಳನ್ನು ಕರೆದುಕೊಂಡು ಬಂದು ಶಾಖಾಪೂರದಲ್ಲಿ ಶಾಶ್ವತವಾಗಿ ವಾಸವಿದ್ದು ಅಲ್ಲಿಯ ಆಸ್ತಿಯನ್ನು ಮಾರಿಕೊಂಡು ಬಂದು ಅದೇ ಹಣದಿಂದ ಹೊನ್ನವ್ವನ ಹೆಸರಿನಲ್ಲಿ ಶಾಖಪುರದಲ್ಲಿ ಹೊಲವನ್ನು

ಖರೀದಿಮಾಡಿದ್ದರು ಎಂದರೇ ಸರಿ. ಅದೇ ಆಸ್ತಿಯಲ್ಲಿ ಸಣ್ಣ ಮಗಳು ಪಾರವ್ವ ಭಾಗ ಕೇಳಿದ್ದು ಕೊಡಲಾರದ ಕಾರಣ ಆಕೆ ಈ ಕೇಸ್ ಅನ್ನು ಮಾಡಿರುತ್ತಾಳೆ ಎಂದರೆ ಸರಿ. ಆ ಆಸ್ತಿಯಲ್ಲಿ ತಾಯಿ ಮತ್ತು ಎಲ್ಲರಿಗೂ ಹಕ್ಕು ಇದೆ ಎಂದರೆ ಸರಿ. ಇದೇ ವಿಚಾರವನ್ನು ನಾನು ವಕೀಲರ ಕಛೇರಿಗೆ ಬಂದು ಹೇಳಿ ಟೈಪ್ ಮಾಡಿಸಿ ಕೋರ್ಟ್ ನಲ್ಲಿ ನಾನು ಪ್ರಮಾಣ ಪತ್ರವನ್ನು ಹಾಕಿದ್ದೆ ಎಂದರೆ ಸರಿ. ಸಾಕ್ಷಿ ಪ್ರಮಾಣ ಪತ್ರ ಹಾಕಿ ಹೋದ ನಂತರ ಹೊನ್ನವ್ವ ಮತ್ತು ನನ್ನ ಅಣ್ಣನ ಮಕ್ಕಳಾದ ಹೊನ್ನನಗೌಡ ಅವರು ನನಗೆ ಮತ್ತು ಪ್ರಾಸಾ 3 ರವರಿಗೆ ಸಮಸ್ಯೆಯನ್ನು ಮಾಡಿರುತ್ತಾರೆ ಎಂದರೆ ಸರಿ. ಇದೇ ಕಾರಣದಿಂದ ನನಗೆ ಕೋರ್ಟ್‌ಗೆ ಬರಲು ಆಗಿರುವುದಿಲ್ಲವೆಂದರೆ ಸರಿ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ.ಕೇ. ಸರಿ ಇದೆ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ. ನ್ಯಾ.ದಂಡಧಿಕಾರಿಗಳು, ಕುಷ್ಟಗಿ**

( ಈ ಹಂತದಲ್ಲಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ವಾದಿ ಪರ ವಕೀಲರು ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು, ಮನವಿಯನ್ನು ಪರಿಗಣಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲು: ವಾದಿ ಪರ ಶ್ರೀ ಎಮ್ ಎಮ್ ಎಮ್ ವಕೀಲರಿಂದ :**

2.

**ಮರುವಿಚಾರಣೆ: ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ.ಕೇ. ಸರಿ ಇದೆ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ. ನ್ಯಾ.ದಂಡಧಿಕಾರಿಗಳು, ಕುಷ್ಟಗಿ**